# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **979** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭಾ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **11.03.2026** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ವಿವಿಧ ದೇಶೀಯ ಗೋ ತಳಿಗಳು ಯಾವುವು; ಹಾಗೂ ಜಿಲ್ಲೆಯಲ್ಲಿ ಪ್ರತಿ ದೇಶೀಯ ಗೋ ತಳಿಯ ಎಷ್ಟು ಸಂಖ್ಯೆಯ ಗೋವುಗಳಿವೆ; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ವಿವಿಧ ದೇಶೀಯ ಗೋ ತಳಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಜಿಲ್ಲೆಯಲ್ಲಿ ದೇಶಿಯ ಗೋ ತಳಿಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಸಲುವಾಗಿ ಸ್ಥಳೀಯವಾಗಿ ಎಷ್ಟು ತಳಿ ಸಂವರ್ಧನಾ ಕೇಂದ್ರಗಳನ್ನು ತೆರೆಯಲಾಗಿದೆ; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಗಿಡ್ಡ ದೇಶಿ ಗೋತಳಿಯ ಅಭಿವೃದ್ಧಿ ಹಾಗೂ ಸಂರಕ್ಷಣೆ ಸಲುವಾಗಿ ಕೊಯ್ಲಾ ಗ್ರಾಮದಲ್ಲಿ ಜಾನುವಾರು ಸಂವರ್ಧನಾ ಕೇಂದ್ರವನ್ನು ಸ್ಥಾಪಿಸಲಾಗಿದೆ. |
| ಇ) | ಸದರಿ ಕೇಂದ್ರಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮ ಹಾಗೂ ಯೋಜನೆಗಳ ವಿವರಗಳೇನು; | ಸದರಿ ಕೇಂದ್ರದಲ್ಲಿ ಮಲೆನಾಡು ಗಿಡ್ಡ ದೇಶಿ ಗೋ ತಳಿಗಳನ್ನು ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮ ಹಾಗೂ ಯೋಜನೆಗಳನ್ನು **ಅನುಬಂಧ-2** ರಲ್ಲಿ ವಿವರಿಸಲಾಗಿದೆ. |
| ಈ) | ಈ ಕೇಂದ್ರಗಳಲ್ಲಿ ಒದಗಿಸಿರುವ ಮೂಲಭೂತ ಹಾಗೂ ತಾಂತ್ರಿಕ ಸೌಲಭ್ಯಗಳು ಹಾಗೂ ಮಾನವ ಸಂಪನ್ಮೂಲಗಳ ವಿವರಗಳೇನು; | **ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ, ಕ್ಷೇತ್ರದಲ್ಲಿರುವ ಮೂಲಭೂತ ಹಾಗೂ ತಾಂತ್ರಿಕ ಸೌಲಭ್ಯಗಳು:-**<br>➢ ದನಗಳ ಶೆಡ್-06, ಕರುಗಳ ಶೆಡ್-03, ಛಾಫ್ ಕಟರ್-01, ಜನರೇಟರ-02, ಮಿನಿ ಟ್ರ್ಯಾಕ್ಟರ್-01, ಟಾಟಾ ಸುಮೋ-01,ವೀಡ್ ಕಟ್ಟರ್-02, ನೀರಿನ ಟ್ಯಾಂಕ್-02 ಮತ್ತು ಕೊಳವೆ ಬಾವಿ-04.<br>➢ ಪ್ರಸಕ್ತ 615.57 ಎಕರೆ ಜಮೀನು ಇದ್ದು, ಇದರಲ್ಲಿ 34 ಎಕರೆ ಜಮೀನಿನಲ್ಲಿ ಹಸಿರು ಮೇವು ಉತ್ಪಾದಿಸಲಾಗುತ್ತಿದೆ ಮತ್ತು ಉಳಿದ ಜಮೀನಿನಲ್ಲಿ ಸ್ವಾಭಾವಿಕ ಹುಲ್ಲುಗಾವಲು ಇದ್ದು, ಈ ಪ್ರದೇಶದಲ್ಲಿ ಜಾನುವಾರುಗಳನ್ನು ಮೇಯಲು ಬಿಟ್ಟು ಸಾಕಾಣಿಕೆ ಮಾಡಲಾಗುತ್ತಿದೆ. ಶುದ್ಧ ದೇಶಿ ಹಾಲು ಹಾಗೂ ಗೋ ಅರ್ಕವನ್ನು ಉತ್ಪಾದಿಸಲಾಗುತ್ತಿದೆ.<br>➢ ಸದರಿ ಕೇಂದ್ರದಲ್ಲಿನ ಮಾನವ ಸಂಪನ್ಮೂಲ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |

<table>
<tr>
<td>ಉ)</td>
<td>ಕಳೆದ ಮೂರು ವರ್ಷಗಳಲ್ಲಿ ಸದರಿ ದೇಶಿಯ ಗೋ ತಳಿ ಸಂವರ್ಧನಾ ಕೇಂದ್ರಗಳಿಗೆ ವಿನಿಯೋಗಿಸಿರುವ ಅನುದಾನ ಎಷ್ಟು ? (ವಿವರಗಳನ್ನು ಒದಗಿಸುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಸದರಿ ದೇಶಿಯ ಗೋ ತಳಿ ಸಂವರ್ಧನಾ ಕೇಂದ್ರಗಳಿಗೆ ವಿನಿಯೋಗಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ. ಸಂ</th><th>ವರ್ಷ</th><th>ವಿನಿಯೋಗಿಸಿರುವ ಅನುದಾನದ ವಿವರ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>2022-23</td><td>223.46</td></tr>
<tr><td>2</td><td>2023-24</td><td>194.58</td></tr>
<tr><td>3</td><td>2024-25</td><td>141.54</td></tr>
</table>
</td>
</tr>
</table>

**ಸಂಖ್ಯೆ:ಪಸಂಮೀ 40 ಸಲೆವಿ 2026**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಚುಕ್ಕೆ ರಹಿತ ಪ್ರ.ಸಂ. 979

<u>ಅನುಬಂಧ-1</u>

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಸ್ತುತ ಇರುವ ವಿವಿಧ ದೇಶೀಯ ಗೋ ತಳಿಗಳ ವಿವರ**

| ಕ್ರ. ಸಂ. | ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ದೇಶೀಯ ಗೋತಳಿಗಳ ಹೆಸರು | 2019 ರಲ್ಲಿ ನಡೆದ 20ನೇ ಜಾನುವಾರು ಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ದೇಶಿ ತಳಿಗಳ ಸಂಖ್ಯೆಯ ವಿವರ |
|---|---|---|
| 1 | ಕೃಷ್ಣಾವ್ಯಾಲಿ | 13 |
| 2 | ಮಲೆನಾಡು ಗಿಡ್ಡ | 38816 |
| 3 | ಗಿರ್ | 634 |
| 4 | ಓಂಗೋಲ್ | 9 |
| 5 | ದೇವಣಿ | 471 |
| 6 | ಖಿಲಾರ್ | 4 |
| 7 | ಹಳ್ಳಿಕಾರ್ | 34 |
| 8 | ಸಾಹಿವಾಲ್ | 123 |
| 9 | ಅಮೃತ್ ಮಹಲ್ | 433 |
| 10 | ಪುಂಗನೂರು | 5 |
| 11 | ರೆಡ್ ಸಿಂಧಿ | 45 |
| 12 | ಥಾರ್ಪಾರ್ಕರ್ | 15 |

ಚುಕ್ಕೆ ರಹಿತ ಪ್ರ.ಸಂ. 979

## ಅನುಬಂಧ-2

ಸದರಿ ಕೇಂದ್ರಗಳಲ್ಲಿ **ಮಲೆನಾಡು ಗಿಡ್ಡ** ದೇಶಿ ಗೋ ತಳಿ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳ ವಿವರ

| ಕ್ರ. ಸಂ. | ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು |
|---|---|
| 1 | ಮಲೆನಾಡು ಗಿಡ್ಡ ತಳಿಯ ಮೂಲವಂಶವಾಹಿನಿಯನ್ನು ಸಂರಕ್ಷಿಸಲು 200 ಮಲೆನಾಡು ಗಿಡ್ಡ ರಾಸುಗಳನ್ನು NAFC ಯೋಜನೆಯಡಿ ಸಂರಕ್ಷಿಸಿ ತಳಿ ಸಂವರ್ಧನೆಗಾಗಿ ಪೋಷಿಸಲಾಗುತ್ತಿದೆ. |
| 2 | ರೈತರಿಗೆ ಶುದ್ಧ ಮಲೆನಾಡು ಗಿಡ್ಡ ಹೋರಿ ಕರುಗಳನ್ನು ರಿಯಾಯಿತಿ ಸರ್ಕಾರಿ ದರದಲ್ಲಿ ಒದಗಿಸಲಾಗುತ್ತಿದೆ. |
| 3 | ಘನೀಕೃತ ವೀರ್ಯ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರಗಳಿಗೆ ಉತ್ಕೃಷ್ಟವಾದ ಮಲೆನಾಡು ಗಿಡ್ಡ ಹೋರಿ ಕರುಗಳನ್ನು ಉತ್ಪಾದಿಸಿ ನೀಡಲಾಗುತ್ತಿದೆ. |
| 4 | ದೇಶಿ ತಳಿಗಳ ಗೋಮೂತ್ರ ಮತ್ತು ಸಗಣಿಯಿಂದ ತಯಾರಿಸಬಹುದಾದ ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ಅವುಗಳ ಔಷಧೀಯ ಗುಣಗಳ ಕುರಿತು ರೈತರಿಗೆ ಅರಿವು ಮಾಡಿಸಲಾಗುತ್ತಿದೆ. |
| 5 | ಶುದ್ಧ ದೇಶಿ ಹಾಲು, ಗೋ ಅರ್ಕ ಉತ್ಪಾದನೆ ಮತ್ತು ಗೋ ಅರ್ಕದಿಂದ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ, ಎರೆಹುಳ ಗೊಬ್ಬರ ತಯಾರಿಕೆ ಹಾಗೂ ಗೋಫಲ ಟ್ರಸ್ಟ್ (ರಿ), ಬೆಂಗಳೂರು ರವರ ಸಹಯೋಗದೊಂದಿಗೆ ಸಾವಯವ ಗೊಬ್ಬರ ತಯಾರಿಕೆ. |
| 6 | ಅಮೃತ ಸಿರಿ ಯೋಜನೆಯಡಿಯಲ್ಲಿ 2021-2022 ನೇ ಸಾಲಿನಿಂದ ರಿಂದ 2024-25 ನೇ ಸಾಲಿನವರೆಗೆ ಆಸಕ್ತ ರೈತರಿಗೆ ಪುಸ್ತಕ ಬೆಲೆಯ ಶೇ. 25 ರ ಬೆಲೆಗೆ ಒಟ್ಟು 323 ಮಲೆನಾಡು ಗಿಡ್ಡ ಹೆಣ್ಣು ರಾಸುಗಳನ್ನು ವಿತರಿಸಲಾಗಿದೆ. |
| 7 | ಮೇವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ,ರೈತರಿಗೆ ಮೇವು ಬೆಳೆ ಬೇರುಗಳನ್ನುನೀಡಲಾಗುತ್ತಿದೆ . |
| 8 | ಪಶುಸಂಗೋಪನಾ ಚಟುವಟಿಕೆಗಳ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. |
| 9 | ಉತ್ತಮ ತಳಿಯ ನಾಟಿ ಕೋಳಿ /ಗಿರಿರಾಜ / ಗಿರಿರಾಣಿ ಕೋಳಿ ಮರಿಗಳನ್ನು ಉತ್ಪಾದಿಸಿ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. |
| 10 | ಉತ್ತಮ ತಳಿಯ ಹಂದಿ ಮರಿಗಳನ್ನು ಉತ್ಪಾದಿಸಿ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. |

ಚುಕ್ಕೆ ರಹಿತ ಪ್ರ.ಸಂ. 979

## ಅನುಬಂಧ-3

ಸದರಿ ಕೇಂದ್ರದಲ್ಲಿನ ಮಾನವ ಸಂಪನ್ಮೂಲ ವಿವರ

| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು | ಷರಾ |
|---|---|---|---|---|---|
| 01 | ಉಪ ನಿರ್ದೇಶಕರು | 1 | 1 | 0 | |
| 02 | ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) | 3 | 2 | 1 | |
| 03 | ಜಾನುವಾರು ಅಭಿವೃದ್ಧಿ ಅಧಿಕಾರಿ | 1 | 0 | 1 | |
| 04 | ಅಧೀಕ್ಷಕರು | 1 | 0 | 1 | |
| 05 | ಪ್ರಥಮ ದರ್ಜೆ ಸಹಾಯಕರು | 1 | 1 | 0 | |
| 06 | ದ್ವಿತೀಯ ದರ್ಜೆ ಸಹಾಯಕರು | 1 | 0 | 1 | |
| 07 | ಬೆರಳಚ್ಚುಗಾರರು | 1 | 0 | 1 | |
| 08 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 1 | 0 | 1 | |
| 09 | ಪಶುವೈದ್ಯಕೀಯ ಪರೀಕ್ಷಕರು | 2 | 2 | 0 | |
| 10 | ಕೃಷಿ ಫೀಲ್ಡ್ ಮೆನ್ / ಕೃಷಿ ಸಹಾಯಕರು | 1 | 0 | 1 | |
| 11 | ವಾಹನ ಚಾಲಕರು | 2 | 2 | 0 | |
| 12 | ಡಿ ದರ್ಜೆ ನೌಕರರು | 34 | 3 | 31 | 26 ಡಿ ದರ್ಜೆ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| ಒಟ್ಟು | | **49** | **11** | **38** | |